**ದಿಃ 02-07-2024ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಹೆಚ್ ಎಸ್ ಎಂ ವಕೀಲರಿಂದಃ

ದಾವಾ ಆಸ್ತಿ ಖಾಲಿ ನಿವೇಶನವಾಗಿರುತ್ತದೆ. ಅದು ಖಾಲಿ ಜಾಗವಾಗಿರುತ್ತದೆ. ಬೇಸ್ಮೆಂಟ್ ಕಟ್ಟಿರುವುದಿಲ್ಲ. ಮುದ್ದೇಗೌಡರು ನನ್ನ ತಂದೆ. ದಾವಾ ಆಸ್ತಿಯನ್ನು ಹೊರತುಪಡಿಸಿ ಅದರ ಅಕ್ಕಪಕ್ಕ ನಮಗೆ ಸೇರಿದ ಆಸ್ತಿ ಇರುವುದಿಲ್ಲ. ನನ್ನ ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ಪ್ರತಿವಾದಿ ಮತ್ತು ಅವರ ಸಹೋದರರ ಮನೆ ಆಸ್ತಿಗಳು ಇರುತ್ತವೆಂದರೆ ಸರಿ. ಅವರ ಮನೆಗಳ ಮುಂಬಾಗಿಲುಗಳು ಪೂರ್ವ ಮತ್ತು ಉತ್ತರ ದಕ್ಕಿಗೆ ಇವೆ. ನನ್ನ ನಿವೇಶನಕ್ಕೆ ಮುಖ ಮಾಡಿಕೊಂಡು ಅವರ ಮನೆಯ ಮುಂಭಾಗಗಳು ಇರುವುದಿಲ್ಲ. ನನ್ನ ಮತ್ತು ಪ್ರತಿವಾದಿಯ ಮನೆಯ ನಡುವೆ ಯಾವುದೇ ಗಲ್ಲಿ ಇರುವುದಿಲ್ಲ. ಒಂದಕ್ಕೊಂದು ತಾಗಿಕೊಂಡು ನಮ್ಮ ಆಸ್ತಿಗಳು ಇರುತ್ತವೆ.

2. ನಾನು ಪಿಯುಸಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನಿಪಿ-3 ರ ದಾಖಲೆಯಲ್ಲಿ ನನ್ನ ಆಸ್ತಿಯ ಪೂರ್ವಕ್ಕೆ ಗ್ರಾಮ ಠಾಣಾಗೆ ಸೇರಿದ ಗಲ್ಲಿ ಇದೆ ಎಂದರೆ ಸಾಕ್ಷಿಯು ಅದು ಎ.ವಿ ಗಂಗಾಧರಪ್ಪನ ಮನೆ ಎಂದು ಹೇಳಿರುತ್ತಾರೆ. ನನ್ನ ನಿವೇಶನಕ್ಕೆ ಅಂಟಿಗೊಂಡಂತೆ ಪಶ್ಚಿಮ ದಕ್ಕಿಗೆ ಓಂಕಾರಪ್ಪನವರ ಮನೆ ಇದೆ. ನನ್ನ ನಿವೇಶನದ ಉತ್ತರಕ್ಕೆ ಸಾರ್ವಜನಿಕ ರಸ್ತೆ ಇದೆ ಎಂದರೆ ಸರಿ. ನನ್ನ ನಿವೇಶನದ ದಕ್ಷಿಣಕ್ಕೆ 30 ಅಡಿ ಅಗಲದ ಓಣಿ ಇದೆ ಎಂದರೆ ಸರಿ. ಸದರಿ ಓಣಿ ಅಕ್ಕಪಕ್ಕ ಓಣಿಗಳ ಮೇಲೆ ನನಗೆ ಹಕ್ಕು ಇಲ್ಲ, ಸಾಕ್ಷಿ ಮುಂದುವರೆದು ಓಡಾಡಲು ಬಳುಸುತ್ತೇನೆಂದು ಹೇಳುತ್ತಾರೆ. ನನ್ನ ದಾವಾ ಆಸ್ತಿಯ ಅಕ್ಕಪಕ್ಕ ಇರುವ ಓಣಿ ಮತ್ತು

ರಸ್ತೆಗಳನ್ನು ನಾನು ಮತ್ತು ಪ್ರತಿವಾದಿ ಹಾಗೂ ಸಾರ್ವಜನಿಕರು ಈಗಲೂ ಸಹ ಓಡಾಡಲು ಬಳಸುತ್ತೇವೆಂದರೆ ಸರಿ.

**3.** ನನಗೆ ದಾವಾ ಆಸ್ತಿ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ಅಜ್ಜನಿಗೆ ಪಂಚಾಯಿತಿಯಿಂದ ನಿವೇಶನ ಬಂದಿರುತ್ತದೆ. ಆ ಬಗ್ಗೆ ಹಕ್ಕುಪತ್ರ ಇದೇಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಮನೆ ಪಟ್ಟಿಯನ್ನೇ ತೋರಿಸಿರುತ್ತಾರೆ. ಪಂಚಾಯಿತಿಯಿಂದ ನೀಡಿದ ಖಾತಾ ದಾಖಲೆಗಳನ್ನು ಬಿಟ್ಟರೇ ಸದರಿ ನಿವೇಶನ ನಮ್ಮ ಕುಟುಂಬಕ್ಕೆ ಸೇರಿದ್ದು ಎನ್ನುವ ಬಗ್ಗೆ ಮಾಲೀಕತ್ವದ ದಾಖಲೆ ಇದೇಯಾ ಎಂಬ ಪ್ರಶ್ನೆಗೆ ಸಾಕ್ಷಿ ಪಂಚಾಯಿತಿಯಿಂದ ಬಂದಿದೆ ಎನ್ನುತ್ತಾರೆ.

**4.** ದಾವಾ ಖಾಲಿ ನಿವೇಶನವನ್ನು ಪ್ರತಿವಾದಿ ಒತ್ತುವರಿ ಮಾಡಿದ್ದಾರೆ. ಸಾಕ್ಷಿ ಮುಂದುವರೆದು **2** ಅಡಿ ಒತ್ತುವರಿ ಮಾಡಿದ್ದಾರೆ ಮತ್ತು ಮಾಡಲು ಪ್ರಯತ್ನ ಪಡುತ್ತಿದ್ದಾರೆಂದು ನುಡಿದಿರುತ್ತಾರೆ. ಪ್ರತಿವಾದಿಯ ಮನೆಗೂ ನನ್ನ ನಿವೇಶನದ ಮಧ್ಯೆ ಯಾವುದೇ ಜಾಗ ಇರುವುದಿಲ್ಲ. ಪ್ರತಿವಾದಿಯು ನನ್ನ ನಿವೇಶನದ ಬಳಿ ಇರುವ ದಕ್ಷಿಣದ ಕಡೆಗೆ ಇರುವ ಓಣಿಯನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಲು ಪ್ರಯತ್ನ ಪಟ್ಟಿದ್ದಾರೆ. ಸದರಿ ಓಣಿ ನನ್ನ ಆಸ್ತಿಯ ದಕ್ಷಿಣಕ್ಕೆ ಇದೆ. ಸದರಿ ಓಣಿ **30** ಅಡಿಗಳ ಅಗಲ ಇದ್ದು, **300** ಅಡಿಗಳ ಉದ್ದ ಇರುತ್ತದೆ. ಸಾಕ್ಷಿ ಮುಂದುವರೆದು ಓಣಿ **20** ಅಡಿ ಅಗಲ ಇದೆ ಎಂದು ಹೇಳುತ್ತಾರೆ.

**5.** ಸದರಿ **20** ಅಡಿಗಳ ಓಣಿಯನ್ನು ಸೇರಿ ನನ್ನ ಆಸ್ತಿಯ **2** ಅಡಿಗಳನ್ನು ಸೇರಿ ಒಟ್ಟು **22** ಅಡಿಗಳನ್ನು ಪ್ರತಿವಾದಿ ಒತ್ತುವರಿ ಮಾಡಿರುತ್ತಾರೆ. ಅವರು ಕಟ್ಟಡ ಕಟ್ಟಲು ಪ್ರಯತ್ನ ಪಟ್ಟಿರುತ್ತಾರೆ. ಅವರು ಕಟ್ಟಡ ಕಟ್ಟಿಲ್ಲ. ಕಟ್ಟಡ ಕಟ್ಟಲು ಪ್ರಯತ್ನ ಪಟ್ಟಾಗ ನಾವು

ವಿರೋದಿಸಿದಾಗ ನಿಲ್ಲಿಸಿರುತ್ತಾರೆ. ನನ್ನ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವ ಓಣಿಯಲ್ಲಿ ಓಡಾಡಲು ಪ್ರತಿವಾದಿ ತೊಂದರೆ ಮಾಡಿರುತ್ತಾರೆ. ನನ್ನ ಆಸ್ತಿಯ ದಕ್ಷಿಣದ ಓಣಿಯ ಮೇಲೆ ನನಗೆ ಪ್ರತಿವಾದಿಗೆ ಹಕ್ಕು ಇರುವುದಿಲ್ಲ.

**6.** ಪ್ರತಿವಾದಿಯು ಒತ್ತುವರಿ ಮಾಡಲು ಪ್ರಯತ್ನಪಟ್ಟ ಬಗ್ಗೆ ವಿರೋಧ ಮಾಡಿದಾಗ ಗಲಾಟೆ ಮಾಡಿದ್ದರು. ಅದರ ಮಾರನೇ ದಿನ ಪಂಚಾಯಿತಿಗೆ ಒತ್ತುವರಿ ಮಾಡುತ್ತಿದ್ದಾರೆಂಬ ಬಗ್ಗೆ ಅರ್ಜಿ ಕೊಟ್ಟಿದ್ದೆ. ಆ ಸಮಯದಲ್ಲಿ ಈ ಕೇಸನ್ನು ಹಾಕಿದ್ದೆ. ನನ್ನ ಅರ್ಜಿಯ ಬಗ್ಗೆ ಪಂಚಾಯಿತಿಯವರು ಸ್ಥಳಕ್ಕೆ ಬಂದು ಪ್ರತಿವಾದಿಗೆ ನೋಟಿಸ್ಸು ಕೊಟ್ಟು ಒತ್ತುವರಿ ಮಾಡಬೇಡಿ ಎಂದು ನಿರ್ದೇಶನಕೊಟ್ಟು ಹೋಗಿದ್ದರು. ಸದರಿ ನೋಟಿಸ್ಸು ಕೊಟ್ಟ ವಿಚಾರ ಈ ದಾವೆ ಹೂಡಿದ ಸಮಯದಲ್ಲಿ ಗೊತ್ತಾಯಿತು. ಸದರಿ ನೋಟಿಸ್ಸನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಸಾಕ್ಷಿ ಮುಂದುವರೆದು ನೋಟಿಸ್ಸು ನನಗೆ ಕೊಟ್ಟಿಲ್ಲ. ಆ ನೋಟಿಸ್ಸನ್ನು ನಾನು ಹಾಜರು ಮಾಡಿಲ್ಲ. ನಾನು ಕೊಟ್ಟ ಅರ್ಜಿ ಮತ್ತು ಪ್ರತಿವಾದಿ ಕೊಟ್ಟ ನೋಟಿಸ್ಸಿನ ಪ್ರತಿಯನ್ನು ಪಂಚಾಯಿತಿಯಿಂದ ಪಡೆದು ಹಾಜರು ಮಾಡಲು ತೊಂದರೆ ಇಲ್ಲ. ಅದನ್ನು ಹಾಜರು ಮಾಡುತ್ತೇನೆ. ಆ ರೀತಿ ನಾನು ಅರ್ಜಿ ಕೊಟ್ಟಿಲ್ಲ ಮತ್ತು ಪ್ರತಿವಾದಿಗೆ ಪಂಚಾಯಿತಿಯವರು ನೋಟಿಸ್ಸು ಕೊಡದೇ ಇರುವುದ್ದರಿಂದ ನಾನು ಅವುಗಳನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ.

<u>(ಈ ಹಂತದಲ್ಲಿ ವಕೀಲರ ಕೋರಿಕೆ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಸಾ ಓ ಹೇ ಕೇ ಸ ಇ ಒ**

(ಶ್ರೀ.ಸಂದೇಶ್.ವಿ.ಭಂಡಾರಿ )
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
**ಅರಸೀಕೆರೆ.**